

# ಗಂಗೆ- ಮಗುವನ್ನು ಬಿಟ್ಟು ಪ್ರಸಾದ ಚಿರನಿದ್ರೆಗೆ

'ಈ ಪಾಪೂ... ಅದೇನು ಚನ್ನಾಗಿದಾಳವ್ವಾ...! ಒಳ್ಳೆ ಬಾಂಬ್ರ ಹುಡಿಗಿ ಹಾಗೆ ಬೆಳ್ಳಗೆ ಇದ್ದಾಳೆ... ನಿನ್ನ ಕೂಸು ಅಂತ ಹೇಳೋಕೆ ಆಗಲ್ಲ. ತಾಯಂತೆ ಮಗಳಲ್ಲ...! ಬೇರೆ... ಬಿಡು... ಇದನ್ನು ನಾನು ಎತ್ತಿ ಮಾತಾಡ್‌ಬಾರ್ದು...! ಬತ್ತೀನಿ' ತೇರು ಸರಿದು ಜನರೆಲ್ಲಾ ಚದುರಿ ಹೋಗುತ್ತಿದ್ದಾಗ ತಟ್ಟನೆ ಇಂದ್ರಾ ಗಾಂಧಿ ಗಂಗೆ ಗಮನ ಸೆಳೆದಳು.

'ಯವ್ವಾ... ಅಕಾ ನೋಡವ್ವಾ... ಕಹಿ ಔಷಧಿ ಮಾಮಾ ನಿಂತಾರಲೀ...!' ಗಂಗೆ ಅತ್ತ ಕಡೆ ನೋಡಿದಾಗ ಶಿವಣ್ಣ ತಮ್ಮನ್ನೇ ಗುರು ಗುರು ನೋಡುತ್ತ ಯಾಕೊ ಏನೊ ಹುಸಿ ನಗುತ್ತಾ ನಿಂತಿದ್ದ... ಆ ನಗೆ ನಂಜಿನ ನಗೆಯಾಗಿ ಭಾಸವಾಯಿತು ಗಂಗೆಗೆ. ಒಂದು ಕ್ಷಣ ಅಲ್ಲಿ ನಿಲ್ಲದೆ ಸರ ಸರ ಆ ಜಾಗದಿಂದ ಹೊರಟುಬಿಟ್ಟಳು.